ಕರ್ನಾಟಕ ವಿಧಾನಸಭೆ

ಗುರುವಾರ 11ನೇ ಜುಲೈ 1996ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ:- ರಾಜ್ಯದ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳಲ್ಲಿ ಸೌಕರ್ಯ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 61 (588)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ನಡೆಸುತ್ತಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳಲ್ಲಿ ಸಂಪೂರ್ಣವಾಗಿ ಸೌಕರ್ಯದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಸದರಿ ವಿದ್ಯಾರ್ಥಿ ನಿಲಯಗಳಲ್ಲಿ ಉತ್ತಮವಾದ ಆಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಇಲ್ಲ. ಸಂಪೂರ್ಣವಾಗಿ ಸೌಕರ್ಯಗಳ ಕೊರತೆ ಇರತಕ್ಕಂತಹ ವಿದ್ಯಾರ್ಥಿನಿಲಯಗಳು ಇರುವುದಿಲ್ಲ.

ಆ) ಇಲ್ಲ. ಸರ್ಕಾರದವರು ನಿಗದಿಪಡಿಸಿರುವ ಹಣಕ್ಕೆ ಅನುಗುಣವಾಗಿ ಆಹಾರವನ್ನು ನೀಡಲಾಗುತ್ತಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಮಾನ್ಯ ಸಚಿವರು ಒದಗಿಸಿದ್ದಾರೆ. ಮಾನ್ಯ ಸಚಿವರು ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ನಡೆಸುತ್ತಿರುವ ಸಾರ್ವಜನಿಕ ವಿದ್ಯಾರ್ಥಿನಿಲಯಗಳಲ್ಲಿ ಯಾವುದೇ ಸೌಕರ್ಯಗಳ

ಕೊರತೆಯು ಇಲ್ಲದೇ ಇರತಕ್ಕಂಥ ವಿದ್ಯಾರ್ಥಿ ನಿಲಯಗಳು ಇಲ್ಲ ಎಂದು ಹೇಳಿದ್ದಾರೆ. ಮಾನ್ಯ ಸಚಿವರು ಸಚಿವ ಸಂಪುಟಕ್ಕೆ ಸೇರಿದ ನಂತರ ಎಷ್ಟು ಜಿಲ್ಲೆಗಳಲ್ಲಿ ಎಷ್ಟು ವಿದ್ಯಾರ್ಥಿ ನಿಲಯಗಳಿಗೆ ತಾವು ಭೇಟಿ ನೀಡಿರುತ್ತೀರಿ? ಮಾನ್ಯ ಕೆ.ಎಂ.ಕೃಷ್ಣರೆಡ್ಡಿಯವರನ್ನು ಲಾ ಕಾಲೇಜನಿಂದಲೂ ನಾನು ನೋಡಿದ್ದೇನೆ. ನ್ಯಾಯದ ಬಗ್ಗೆ ಬಹಳ ಹೊರಾಟ ಮಾಡಿದವರು, ಸಮಾಜದ ಬಗ್ಗೆ ಬಹಳ ಕಳಕಳಿಯನ್ನು ಹೊಂದಿರುವಂಥವರು. ಆದರೆ ಅವರು ಏನು ಮಾಡಿದ್ದಾರೆಂದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕೊಟ್ಟಂತಹ ಉತ್ತರಗಳನ್ನು ತಂದು ಸದನಕ್ಕೆ ಕೊಟ್ಟಿದ್ದಾರೆ. ಸ್ವಾಮಿ, ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳು ಎಂದು ಹೇಳಿದರೆ, ಅಲ್ಲಿ ವಿದ್ಯಾರ್ಥಿಗಳು ವಾಸ ಮಾಡುವುದಕ್ಕೆ ಆಗುವುದಿಲ್ಲ. ಅಲ್ಲಿ ನಾಯಿಗಳು, ಇಲಿಗಳು ವಾಸ ಮಾಡಬಹುದು.

ಅಧ್ಯಕ್ಷರು:- ಮಾನ್ಯ ಸದಸ್ಯರು ಬರೀ ಉಪ ಪ್ರಶ್ನೆಯನ್ನು ಮಾತ್ರ ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್:- ನಾನು ಕೇಳಿರತಕ್ಕಂತಹ ಪ್ರಶ್ನೆಗೆ ಸಂಬಂಧಪಟ್ಟಂತಹ ಉತ್ತರವನ್ನು ಸಚಿವರಿಂದ ಕೊಡಿಸಿ.

ಅಧ್ಯಕ್ಷರು:- ಮಾನ್ಯ ವಾಟಾಳ್ ನಾಗರಾಜ್‌ರವರೆ, ಎಲ್ಲೆಲ್ಲಿ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ನಡೆಸುತ್ತಿರುವ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳಲ್ಲಿ ಸೌಕರ್ಯಗಳು ಇಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆ, ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳುವುದು ಎಂದು ಸರ್ಕಾರಕ್ಕೆ ಹೇಳಬಹುದು.

ಶ್ರೀ ಎಸ್.ಆರ್.ಲಕ್ಷ್ಮಯ್ಯ:- ಯಾವ ಸ್ಥಳಗಳಲ್ಲಿ ಈ ರೀತಿಯಾಗಿ ಇವೆ ಎಂದು ಹೇಳಬೇಕು. ಅದನ್ನು ಬಿಟ್ಟು ಇಡೀ ರಾಜ್ಯದಲ್ಲಿ ಆಗಿದೆ ಎಂದು ಹೇಳಿದರೆ ಹೇಗೆ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ನಾನು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾದ ಮೇಲೆ ನಮ್ಮ ಸ್ನೇಹಿತರು ಹೇಳಿದ ಹಾಗೆ ಮೂರು ಜಿಲ್ಲೆಗಳಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಭೇಟಿಯನ್ನು ಕೊಟ್ಟಿದ್ದೆ. ಮೊದಲನೆಯದಾಗಿ ಬೆಂಗಳೂರಿನಲ್ಲಿರತಕ್ಕಂಥ ಮಹಿಳೆಯರ ವಿದ್ಯಾರ್ಥಿ ನಿಲಯಕ್ಕೆ ಚಿತ್ರದುರ್ಗದಲ್ಲಿ ಮತ್ತು ಕೋಲಾರದಲ್ಲಿರತಕ್ಕಂಥ ವಿದ್ಯಾರ್ಥಿನಿಲಯಕ್ಕೆ ಭೇಟಿಯನ್ನು ಕೊಟ್ಟಿದ್ದೆ. ಇಡೀ ಕರ್ನಾಟಕದಲ್ಲಿರತಕ್ಕಂಥ ಎಲ್ಲಾ ವಿದ್ಯಾರ್ಥಿ ನಿಲಯಗಳನ್ನು ನಾನು ಪ್ರತ್ಯೇಕವಾಗಿ ನೋಡಬೇಕೆಂದರೆ, ಅದಕ್ಕೆ ಕಾಲಾವಕಾಶವಿರುವುದಿಲ್ಲ. ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಕರ್ನಾಟಕದಲ್ಲಿ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳು ಒಟ್ಟು 1100 ಇವೆ. ಕಟ್ಟಡ ಇರತಕ್ಕಂತಹ ಕೆಲವು ಕಡೆಗಳಲ್ಲಿ ಶೌಚಾಲಯಗಳು ಸರಿಯಾಗಿ ಇರುವುದಿಲ್ಲ ಎನ್ನತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ. ಆದುದರಿಂದ ಸರ್ಕಾರದ ವತಿಯಿಂದ ಆದಷ್ಟು ಜಾಗ್ರತೆ ತೀವ್ರವಾಗಿ ಗಮನವನ್ನು ಹರಿಸಿ ಶೌಚಾಲಯವನ್ನು ಕೊಡಬೇಕೆಂದು ಇದ್ದೇವೆ. ಆಹಾರ ವಿತರಣೆಯ ಬಗ್ಗೆ ಮಾನ್ಯ ಸದಸ್ಯರ ತೀವ್ರವಾದಂತಹ ಕಳಕಳಿ ಏನಿದೆ ಅದರ ಕಡೆ ಗಮನವನ್ನು ಕೊಟ್ಟಿದೆ. ಹಿಂದೆ ಒಬ್ಬ ವಿದ್ಯಾರ್ಥಿಗೆ ಆಹಾರವನ್ನು ಒದಗಿಸುವುದಕ್ಕೆ 250 ರೂಪಾಯಿಗಳನ್ನು ತಿಂಗಳಿಗೆ ಕೊಡುತ್ತಿದ್ದು ಅದನ್ನು 300

ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಅದೇ ರೀತಿಯಲ್ಲಿ 150 ರೂಪಾಯಿಗಳನ್ನು ಒಬ್ಬ ವಿದ್ಯಾರ್ಥಿಗೆ ಆಹಾರ ವಿತರಣೆಗಾಗಿ ಕೊಡುತ್ತಿದ್ದ ಹಣವನ್ನು 250 ರೂಪಾಯಿಗಳಿಗೆ ಮಾಡಿದ್ದೇವೆ. ಮತ್ತೆ ಕೆಲವು ಕಡೆ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಕಟ್ಟಡಗಳು ಪ್ರಾರಂಭವಾಗಿದೆ, ಮತ್ತೆ ಕೆಲವು ಕಡೆಗಳಲ್ಲಿ ಕಟ್ಟಡವನ್ನು ಕಟ್ಟಿ ಮುಗಿಸಿದ್ದೇವೆ, ಕೆಲವು ಪ್ರಾರಂಭವಾಗುವಂತಹ ಹಂತದಲ್ಲಿಯೂ ಸಹ ಇದೆ. ಅದಷ್ಟು ಬೇಗ ಎಲ್ಲಾ ಸಾರ್ವಜನಿಕ ವಿದ್ಯಾರ್ಥಿ ನಿಲಯಗಳನ್ನು ಚೊಕ್ಕಟವಾಗಿಡುವುದಕ್ಕೆ, ಒಳ್ಳೆಯ ಆಹಾರವನ್ನು ಕೊಡಿಸುವುದಕ್ಕೆ ಸಂಪೂರ್ಣವಾಗಿ ಗಮನ ಹರಿಸುತ್ತೇನೆ.

ಶ್ರೀ ಮಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರ ಕಳಕಳಿಯ ಬಗ್ಗೆ ಪ್ರಶ್ನೆಯನ್ನು ಮಾಡುತ್ತಿಲ್ಲ. ಈ ಸಾರ್ವಜನಿಕ ವಿದ್ಯಾರ್ಥಿನಿಲಯದ ಬಗ್ಗೆ ಯಾವುದೇ ಚಿಂತನೆಯನ್ನು ಮಾಡುವುದಕ್ಕೆ ಅವರು ಹೋಗಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಪ್ರಶ್ನೆ ಇವತ್ತು ಏನಾಗಿದೆ ಎಂದರೆ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳು ಎಂದು ಹೇಳಿದರೆ, ಅದು ಯಾರಿಗೂ ಬೇಡವಾದಂತಹ ಕೂಸಾಗಿದೆ. ಅದು ಯಾರಿಗೂ ಬೇಡ. ಅದನ್ನು ಯಾರು ಮುಟ್ಟಬಾರದು, ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳು ಎಂದರೆ ಅಷ್ಟು ತೀರ ಕಡೆಯದಾಗಿ ನಿಷ್ಕುರವಾಗಿ ಕಾಣಲಾಗುತ್ತಿದೆ. ಅದಕ್ಕಾಗಿ ತಮ್ಮ ಮೂಲಕ ಒತ್ತಾಯ ಮಾಡುವುದು ಏನೆಂದರೆ ಸಂಬಂಧಪಟ್ಟಂತಹ ಸಚಿವರು ಪ್ರತಿ ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ಅವುಗಳನ್ನು ಸರಿಪಡಿಸಬೇಕು. ಈಗ ಇರತಕ್ಕಂತಹ ಹಾಸ್ಟೆಲ್‌ಗಳಲ್ಲಿ ಶೇಕಡ 50 ಭಾಗ ಹಾಸ್ಟೆಲ್ ಕೊಠಡಿಗಳು ಸರಿಯಿಲ್ಲ. ಮಳೆ ಬಂದಾಗ ನೀರು ಸೋರುತ್ತದೆ, ವಿದ್ಯಾರ್ಥಿಗಳು ಕೊಠಡಿಯಲ್ಲಿ ಮಲಗಿಕೊಳ್ಳುವುದಕ್ಕೆ ಆಗುವುದಿಲ್ಲ, ಮತ್ತು ಈಗ ವಿದ್ಯಾರ್ಥಿಗಳಿಗೆ ದಿನನಿತ್ಯ ಕೊಡತಕ್ಕಂತಹ ಆಹಾರವು ಸಾಕಾಗವುದಿಲ್ಲ. ಸರ್ಕಾರದವರು ಪ್ರತಿತಿಂಗಳು ಒಬ್ಬ ವಿದ್ಯಾರ್ಥಿಗೆ 250 ಅಥವಾ 300 ರೂಪಾಯಿಗಳನ್ನು ಏನು ಕೊಡುತ್ತಿದ್ದೀರಿ, ಖಂಡಿತವಾಗಿಯೂ ಅದು ಸಾಕಾಗುವುದಿಲ್ಲ. ಅದನ್ನು ಸರಿಪಡಿಸುವಂತಹ ವ್ಯವಸ್ಥೆಯನ್ನು ಸರ್ಕಾರದವರು ಯಾವತ್ತು ಮಾಡುತ್ತೀರಿ? ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ಮಹಾತ್ಮಾ ಗಾಂಧಿಯ ರಸ್ತೆಯಲ್ಲಿ ಒಂದು ಸಾರ್ವಜನಿಕ ವಿದ್ಯಾರ್ಥಿ ನಿಲಯವಿದೆ, ಈಗ ಆ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳನ್ನು ಖಾಲಿ ಮಾಡಿಸಿ ಯಾರೋ ಒಬ್ಬ ದೊಡ್ಡ ಆಸಕ್ತಿ ಇರತಕ್ಕಂತಹ ದೊಡ್ಡ ವ್ಯಕ್ತಿ ಕಟ್ಟಡವನ್ನು ಹೊಡೆದು ಹಾಕಿ ದೊಡ್ಡ ಕಾಂಪ್ಲೆಕ್ಸ್ ಮಾಡಬೇಕೆಂಬ ಆಸಕ್ತಿಯಿಂದ ಇದ್ದಾರೆ. ಅದರ ಬಗ್ಗೆಯೂ ಸಹ ಸರ್ಕಾರದವರು ಗಮನವನ್ನು ಕೊಡಬೇಕು. ಏಕೆಂದರೆ ಹಾಸ್ಟೆಲ್‌ಗಳನ್ನು ಸರಿಯಾದಂತಹ ರೀತಿಯಲ್ಲಿ ಸುಂದರವಾಗಿ ಕಟ್ಟಬೇಕೇ ಹೊರತು, ಆ ಜಾಗವನ್ನು ಯಾರೋ ವ್ಯಾಪಾರಸ್ಥರಿಗೆ ಕೊಡತಕ್ಕಂತಹ ವ್ಯವಸ್ಥೆಗೆ ಸರ್ಕಾರದವರು ಹೋಗಬಾರದು. ಇರತಕ್ಕ ಹಾಸ್ಟೆಲುಗಳನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ನಿರ್ದಿಷ್ಟವಾಗಿ ಎಲ್ಲೆಲ್ಲಿ ಆ ರೀತಿಯಾಗಿ ಆಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆ ಅವುಗಳನ್ನು ತಿಳಿಸಿ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಿಳಿಸಿದಂತಹ ಎಲ್ಲಾ ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿ ಹಾಸ್ಟೆಲ್‌ಗಳಿಗೆ ಎಲ್ಲಾ ರೀತಿಯ ಸೌಲಭ್ಯವನ್ನು ಕಲ್ಪಿಸಿಕೊಡುವುದಕ್ಕೆ ಪ್ರಯತ್ನ ಪಡುತ್ತೇನೆ.

ಶ್ರೀ ವೈ.ರಾಮಕೃಷ್ಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರತಕ್ಕಂತಹ ವಿಷಯದ ಮೇಲೆ 1987ನೇ ಇಸವಿಯಲ್ಲಿ ಈ ಸದನದಲ್ಲಿ ಚರ್ಚೆಯಾಗಿ, ಆಗ ಗುರುಪ್ರಸಾದ್ ಹೌಸ್ ಕಮಿಟಿ ಎಂದು ನೇಮಕ ಮಾಡಿ, ಅವರು ಅನೇಕ ಸಲಹೆಗಳನ್ನು ಸೂಚನೆಗಳನ್ನು ತಮ್ಮ ವರದಿಯ ಮೂಲಕ ಕೊಟ್ಟಿದ್ದಾರೆ. ಇನ್ನೂ ಸಮಾಜ ಕಲ್ಯಾಣ ಇಲಾಖಾ ವಿಷಯ ಸಮಿತಿಯು ಸಹ ಎರಡು ವರ್ಷಗಳಲ್ಲಿ ಇದರ ಬಗ್ಗೆ ಎರಡು ಸಲ ವರದಿಯನ್ನು ಕೊಟ್ಟಿದೆ. ಸರ್ಕಾರದವರು ವಿಷಯ ಸಮಿತಿಯವರು ಮಾಡಿರುವ ಒಂದು ಶಿಫಾರಸ್ಸನ್ನು ಗಣನೆಗೆ ತೆಗೆದುಕೊಳ್ಳದೇ, ಮತ್ತು ಸಕಾಲದಲ್ಲಿ ಹಣವನ್ನು ಬಿಡುಗಡೆ ಮಾಡದೇ, ಅಧಿಕಾರಿಗಳ ನಿರ್ಲಕ್ಷ್ಯದಿಂದ ಇವತ್ತು ವಿದ್ಯಾರ್ಥಿಗಳು ನರಕಯಾತನೆಯನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆಗಳನ್ನು ಕೂಡ ಪರಿಗಣನೆಗೆ ತೆಗೆದುಕೊಳ್ಳುತ್ತೇನೆ. ಆದಷ್ಟು ಜಾಗ್ರತೆ ಮಾನ್ಯ ಸದಸ್ಯರು ಹೇಳಿದಂತಹ ಸಲಹೆಗಳನ್ನು ಕಾರ್ಯ ರೂಪಕ್ಕೆ ತರಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಅದು ಏನೆಂದರೆ ಬೆಂಗಳೂರಿನ ದೊಡ್ಡಕಲ್‌ನಳ್ಳಿ ತರೀಕೆರೆ ತಾಲ್ಲೂಕಿನ ಲಿಂಗದಹಳ್ಳಿ, ಮುದುಗೆರೆ ತಾಲ್ಲೂಕಿನ ಹಾಲ್ದೂರು ಈ ಮೂರು ಸಾರ್ವಜನಿಕ ವಿದ್ಯಾರ್ಥಿ ನಿಲಯಗಳ ಬಗ್ಗೆ ನನ್ನಲ್ಲಿ ಮಾಹಿತಿ ಇದೆ. ಅಲ್ಲಿ ಅತ್ಯಂತ ಕಳಪೆ ಮಟ್ಟದ ಆಹಾರವನ್ನು ವಿದ್ಯಾರ್ಥಿಗಳಿಗೆ ಸರಬರಾಜು ಮಾಡುತ್ತಿದ್ದಾರೆ. ಅದರಲ್ಲಿಯೂ ವಿಶೇಷವಾಗಿ ಮುದುಗೆರೆ ತಾಲ್ಲಕಿನ ಹಾಲ್ದೂರಿನ ಹಾಸ್ಟೆಲ್ ಸೂಪರಿಂಡಿಂಡೆಂಟ್‌ರವರ ಮೇಲೆ ಸಾಕಷ್ಟು ದೂರನ್ನು ಸಂಬಂಧಪಟ್ಟಂತಹ ಇಲಾಖೆಗೆ ಕೊಟ್ಟಿದ್ದರೂ ಕೂಡ, ಇದುವರೆಗೂ ಅವರ ಮೇಲೆ ಕ್ರಮವನ್ನು ತೆಗೆದುಕೊಂಡಿಲ್ಲ. ಆದ್ದರಿಂದ ಈಗಲಾದರೂ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೀರೋ?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ, ಅದರ ಬಗ್ಗೆ ಸಮಸ್ಯೆಯನ್ನು ಬಗೆಹರಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಗುರುಪ್ರಸಾದ್ ವರದಿಯನ್ನು ಸರ್ಕಾರ ಯಾವತ್ತಿನಿಂದ ಜಾರಿಗೆ ತರುತ್ತದೆ?

ಶ್ರೀ ಡಿ.ಆರ್.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಬಹಳಷ್ಟು ಸಾರ್ವಜನಿಕ ಹಾಸ್ಟೆಲ್‌ಗಳಲ್ಲಿ ಸರ್ಕಾರದವರು ಎಷ್ಟು ಹುಡುಗರಿಗೆ ಗ್ರ್ಯಾಂಟ್‌ನ್ನು ಕೊಡುತ್ತಾರೆ. ಅಷ್ಟು ಹುಡುಗರು ವಿದ್ಯಾರ್ಥಿ ನಿಲಯದಲ್ಲಿರುವುದಿಲ್ಲ. ಆದಕ್ಕಾಗಿ ನಾನು ಮಂತ್ರಿಗಳಿಗೆ

ಸೂಚನೆಯನ್ನು ಕೊಡುವುದೇನೆಂದರೆ ಹಾಸ್ಟೆಲ್ ಮುಂದೆ ಸರ್ಕಾರ ಎಷ್ಟು ಹುಡುಗರಿಗೆ ಆ ಹಾಸ್ಟೆಲ್‌ನಲ್ಲಿ ಗ್ರಾಂಟ್ ಕೊಡುತ್ತೀರಾ ಎನ್ನುವ ಬಗ್ಗೆ ಬೋರ್ಡನ್ನು ಬರೆಸಿ ಹಾಕುವುದು. ಮತ್ತೆ ಪ್ರತಿ ದಿನ ವಿದ್ಯಾರ್ಥಿಗಳಿಗೆ ಏನು ಆಹಾರವನ್ನು ಕೊಡುತ್ತೀರಿ ಎಂಬುದನ್ನು ಸಹ ಆ ಬೋರ್ಡ್‌ನಲ್ಲಿ ಬರೆಸಿ ಹಾಕಿ. ಸರ್ಕಾರದವರು ಏನು ಹಣವನ್ನು ಕೊಡುತ್ತಾರೆ, ಅದಕ್ಕೆ ಹಾಸ್ಟೆಲ್‌ನವರು ಏನು ಕೊಡುತ್ತಾರೆನ್ನುವುದು ಸಾರ್ವಜನಿಕರಿಗೂ ಗೊತ್ತಾಗುತ್ತದೆ. ಮತ್ತು ಹಾಸ್ಟೆಲ್ ಹುಡುಗರಿಗೂ ಸಹ ಕೊಡಬೇಕಾದಂತಹ ಆಹಾರವನ್ನು ಕೊಡುತ್ತಿಲ್ಲವೆನ್ನುವುದು ಗೊತ್ತಾಗುತ್ತದೆ.

ಅಧ್ಯಕ್ಷರು:- ಬಹಳ ಉತ್ತಮವಾದಂತಹ ಸಲಹೆಯಾಗಿದೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ನೇರವಾಗಿ ವಿವರಗಳನ್ನು ಕೇಳಿ ಪ್ರಶ್ನೆಯನ್ನು ಕಳುಹಿಸಿದರೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು:- ಮಾನ್ಯ ಡಿ.ಆರ್.ಪಾಟೀಲ್‌ರವರು ಏನು ಕೇಳುತ್ತಿದ್ದಾರೆಂದರೆ, ನೀವು ಅವರಿಗೆ ಒದಗಿಸಿರತಕ್ಕ ಹಣದಲ್ಲಿ ಅವರಿಗೆ ಯಾವರೀತಿಯ ಆಹಾರವನ್ನು ಕೊಡಬಹುದು, ಏನೇನು ಊಟ ತಿಂಡಿಗಳನ್ನು ಕೊಡಬಹುದೆಂಬುದನ್ನು ಪ್ರಕಟಣೆ ಮಾಡಿದರೆ, ಆ ಹಾಸ್ಟೆಲ್‌ಗಳಲ್ಲಿ ಇನ್‌ಮೇಟ್ಸ್ ಯಾರಿರುತ್ತಾರೆ ಅವರು ಹೋಗಿ ಅಥಾರಿಟೀಸ್ ಸರಿಯಾಗಿ ಕೊಡದೇ ಇದ್ದಾಗ ಗಲಾಟೆ ಮಾಡುವುದಕ್ಕೆ ಅವಕಾಶ ಇರುತ್ತದೆ. ಅಲ್ಲಿಯ ಅಧಿಕಾರಿಗಳ ಮೇಲೆ ಮೊದಲೇ ಪ್ರೆಶರ್ ಇರುತ್ತದೆ. ಆದ್ದರಿಂದ ಆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಿದ್ದಾರೆ.

ಶ್ರೀ ಡಿ.ಆರ್.ಪಾಟೀಲ್:- ಇನ್ನೊಂದು ವಿಚಾರ ಎಂದರೆ ಈ ಹಾಸ್ಟೆಲ್ ಹುಡುಗರಿಗೆ ಎಷ್ಟು ಗ್ರ್ಯಾಂಟನ್ನು ಸರ್ಕಾರ ಕೊಡುತ್ತಿದೆ? ಉದಾಹರಣೆಗೆ ಹೇಳುವುದಾದರೆ ಒಂದು ಹಾಸ್ಟೆಲ್‌ನಲ್ಲಿ 100 ಮಕ್ಕಳಿವೆ ಎಂದು ತೋರಿಸುತ್ತಾರೆ. ಆದರೆ ನಿಜವಾಗಿ ಅಲ್ಲಿರತಕ್ಕವರು ಕೇವಲ 50 ಮಕ್ಕಳು. ಇನ್ನುಳಿದ 50 ಮಕ್ಕಳದ್ದನ್ನು ಇವರು ಮೋಸಮಾಡುತ್ತಿದ್ದಾರೆಂದು ಅಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಗೊತ್ತಾಗಬೇಕು.

ಅಧ್ಯಕ್ಷರು:- ಇದು ಬಹಳ ಒಳ್ಳೆಯ ಸಲಹೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಅವರ ಪ್ರಶ್ನೆಗೆ ನಾನು ಉತ್ತರವನ್ನು ಒದಗಿಸಿದ್ದೇನೆ. ಅವರು ಡೀಟೀಲ್ಸ್ ಬೇಕೆಂದರೆ ಬೇರೆ ಪ್ರಶ್ನೆ ಕೇಳಬೇಕು.

ಶ್ರೀ ವಾಟಾಳ ನಾಗರಾಜ್:- ತಾವು ಪ್ರತಿಯೊಬ್ಬ ವಿದ್ಯಾರ್ಥಿಗೆ ಅವನ ಆಹಾರಕ್ಕಾಗಿ ಇಂತಿಷ್ಟು ಎಂದು ಹಣವನ್ನು ಕೊಡುತ್ತಿದ್ದೀರಿ. ಪ್ರತಿದಿನ ಆ ಹಣಕ್ಕೆ ತಕ್ಕಂತೆ ಯಾವ ಯಾವ ಆಹಾರವನ್ನು ಕೊಡಬಹುದು? ಚಪಾತಿ ಕೊಡುತ್ತೀರಾ? ಅನ್ನ ಕೊಡುತ್ತೀರಾ? ಸಾಂಬಾರ್ ಕೊಡುತ್ತೀರಾ? ಏನೇನು ಕೊಡುತ್ತೀರೆಂಬ ಪಟ್ಟಿಯನ್ನು ಹೇಳಬೇಕು.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಈಗಾಗಲೇ ನಾನು ಹೇಳಿದ್ದೇನೆ. ಮೆಟ್ರಿಕ್ ಪೂರ್ವದ ವಿದ್ಯಾರ್ಥಿಗಳಿಗೆ 250ರೂ. ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ 300ರೂ.ನಂತೆ

ಕೊಡುತ್ತಿದ್ದೇವೆ. ಆದರೆ ಅವರಿಗೆ ಯಾವರೀತಿಯ ಆಹಾರವನ್ನು ಒದಗಿಸಲಾಗುತ್ತಿದೆ ಎಂಬ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಿದ್ದರೆ ಅದಕ್ಕೆ ಉತ್ತರವನ್ನು ಒದಗಿಸುತ್ತಿದ್ದೆ.

ಅಧ್ಯಕ್ಷರು:- ಅದೂ ಕೂಡ ಸರಿಯಾಗಿದೆ. ಎಲ್ಲ ಸಾರ್ವಜನಿಕ ವಿದ್ಯಾರ್ಥಿನಿಲಯಗಳಿಗೂ ಸಂಬಂಧಪಟ್ಟಂಥ ಊಟ, ತಿಂಡಿಗಳ ವಿವರಗಳನ್ನು ಕೇಳಿದರೆ ಮಾನ್ಯ ಸಚಿವರು ಹೇಗೆ ಕೊಡುವುದಕ್ಕೆ ಸಾಧ್ಯ?

ಶ್ರೀ ಬಿ.ಎಸ್.ಯಡಿಯೂರಪ್ಪ:- ಪ್ರತಿಯೊಂದು ವಸ್ತುಗಳ ಬೆಲೆಗಳೂ ಗಗನಕ್ಕೇರಿರುವ ಈ ಕಾಲದಲ್ಲಿ ನೀವು ಕೊಡುತ್ತಿರುವಂಥ ಈ ಹಣದಲ್ಲಿ ಆ ಹಾಸ್ಟೆಲ್‌ನ ಸೂಪರಿಂಟೆಂಡೆಂಟ್ ಒಳ್ಳೆಯ ಊಟವನ್ನು ಹೇಗೆ ಕೊಡುವುದಕ್ಕೆ ಸಾಧ್ಯ? ಬಡವರು ತಮ್ಮ ಮನೆಯಲ್ಲಿ ನೆಮ್ಮದಿಯಿಂದ ಎರಡು ಹೊತ್ತು ಊಟ ಮಾಡುವಷ್ಟನ್ನಾದರೂ, ಆ ಮಕ್ಕಳು ಹಾಸ್ಟೆಲ್‌ನಲ್ಲಿ ಊಟ ಮಾಡಿದರೆ ಮಾತ್ರ ಅವರು ವಿದ್ಯಾಭ್ಯಾಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗ ಏನು ನೀವು ಕೊಡುತ್ತಿದ್ದೀರಿ ಅದನ್ನು ಎರಡು ಪಟ್ಟು ಹೆಚ್ಚು ಕೊಟ್ಟರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಅವರು ಸರಿಯಾಗಿ ಎರಡು ಹೊತ್ತು ಊಟವನ್ನು ಕೊಡುವುದಕ್ಕಾಗುವುದಿಲ್ಲ. ಈ ವರ್ಷದಿಂದ ಈ ಹಣವನ್ನು ಜಾಸ್ತಿ ಮಾಡುತ್ತೀರೋ ಎಂದು ಕೇಳಬಯಸುತ್ತೇನೆ.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- 1993-94ರಲ್ಲಿ ಕೊಡುತ್ತಿದ್ದುದರ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿದೆ. ಕೆ.ಜಿ.ಗೆ 3.20ರೂ.ಗಳಂತೆ 10 ಕೆ.ಜಿ ಆಹಾರಧಾನ್ಯವನ್ನು ಪಡಿತರ ವ್ಯವಸ್ಥೆಯಲ್ಲಿ ನಾವು ಪಡೆಯುತ್ತಿದ್ದೇವೆ; ಈಗ ಬೆಲೆ ಗಗನಕ್ಕೇರುತ್ತಿರುವ ಸಂದರ್ಭದಲ್ಲಿ ಹೆಚ್ಚು ಬೇಕೆಂದರೆ ಜಾಸ್ತಿ ಕೊಡುತ್ತೇವೆ.

ಶ್ರೀಕಾಂತ ರುದ್ರಪ್ಪ ಅಂಬಡಗಟ್ಟಿ:- ಸದರಿ ವಿದ್ಯಾರ್ಥಿನಿಲಯಗಳಲ್ಲಿ ಉತ್ತಮವಾದ ಆಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ಇದಕ್ಕೆ ಸಮರ್ಪಕವಾದ ಉತ್ತರ ಸಚಿವರಿಂದ ಬಂದಿಲ್ಲ. ಸರ್ಕಾರದವರು ನಿಗದಿಪಡಿಸಿರುವ ಹಣಕ್ಕೆ ಅನುಗುಣವಾಗಿ ಆಹಾರವನ್ನು ನೀಡಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇಲ್ಲಿ ಪ್ರಶ್ನೆ ಏನೆಂದರೆ ವಿದ್ಯಾರ್ಥಿಗಳಿಗೆ ಉತ್ತಮವಾದ ಆಹಾರವನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಎಂದು ಪ್ರಶ್ನೆಯನ್ನು ಕೇಳಿದ್ದಾರೆ. ಉತ್ತಮವಾದ ಆಹಾರವನ್ನು ನೀಡಲಾಗುತ್ತಿದೆ, ಅಥವಾ ಇಲ್ಲ ಎಂದು ಹೇಳಿದರೆ ಅದು ಸಮರ್ಪಕವಾದ ಉತ್ತರವಾಗುತ್ತದೆ. ಆದರೆ ''ಕೊಟ್ಟಂಥ ಹಣಕ್ಕನುಗುಣವಾಗಿ'' ಎಂದರೆ ಅದು ಕಳಪೆ ಮಟ್ಟದಲ್ಲಿದೆಯೇ, ಇಲ್ಲವೇ ಎಂಬುದು ಗೊತ್ತಾಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಸಚಿವರಿಗೆ ಸಹಾಯ ಆಗುವಂಥ ರೀತಿಯಲ್ಲಿ ಹೇಳುತ್ತಿದ್ದೇನೆ. ಪ್ರಶ್ನೋತ್ತರ ವೇಳೆಯಲ್ಲಿ ಹಣಕಾಸಿಗೆ ಸಂಬಂಧಪಟ್ಟ ಪ್ರಶ್ನೆ ಏನಾದರೂ ಬಂದಾಗ, ಮಾನ್ಯ ಹಣಕಾಸಿನ ಸಚಿವರಾದ ಸಿದ್ದರಾಮಯ್ಯನವರು ಇಲ್ಲಿಯೇ ಇರುವ ಹಾಗೆ ತಾವು ಒಂದು ರೂಲಿಂಗ್‌ನ್ನು

ಕೊಡಬೇಕು. ಏಕೆಂದರೆ ನಾವು ಸಚಿವರನ್ನು ಏನಾದರೂ ಮಾಡಿ ಅವರ ಬಾಯಿಯನ್ನು ಬಿಡಿಸಿ 250 ರೂ.ಗಳನ್ನು ಏನು ಈ ಹಾಸ್ಟೆಲ್‌ಗಳಿಗೆ ಕೊಡುತ್ತಿದ್ದಾರೆ ಅದನ್ನು 400 ರೂ. ಕೊಡುವಂತೆ ಮಾಡಿಸುವುದಕ್ಕೆ ಹೊರಟಾಗ ಇವರು ಮಾಪಸು ಕಳುಹಿಸುತ್ತಾರೆ. ಇದರಿಂದಾಗಿ ಅವರಿಗೆ ಹೆದರಿಕೊಂಡು ಇವರು ಉತ್ತರ ಕೊಡುವುದಕ್ಕೆ ಹಿಂಯ ಮುಂದು ನೋಡುತ್ತಾರೆ. ಆದ್ದರಿಂದ ಇಂಥ ಸಂದರ್ಭದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ಇಲ್ಲಿ ಇರುವ ರೀತಿಯಲ್ಲಿ ಏನಾದರೂ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು:- ಅದನ್ನು ಪರಿಶೀಲಿಸೋಣ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೆ, ಮಾನ್ಯ ಕೃಷ್ಣಾರೆಡ್ಡಿಯವರು ಹಿರಿಯ ಸದಸ್ಯರು, ಅವರಿಗೆ ಅನುಭವ ಇದೆ. ಇವತ್ತಿನ ಪರಿಸ್ಥಿತಿ ಯಾವ ರೀತಿ ಇದೆ, ಮಕ್ಕಳಿಗೆ 250ರೂ., 300ರೂ. ಕೊಡುತ್ತಿರುವುದರಲ್ಲಿ ಯಾವ ರೀತಿ ಆಹಾರ ಕೊಡಬಹುದೆಂಬ ಅನುಭವ ಅವರಿಗಿದೆ. ಅವರು ಏನು ಹೇಳುತ್ತಿದ್ದಾರೆಂದರೆ, ಹಸಿರು ಕಾರ್ಡಿನ ಮೂಲಕ 3.20ರೂ.ನಂತೆ ಕಡಿಮೆ ದರದಲ್ಲಿ ಅಕ್ಕಿಯನ್ನು ಕೊಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇದು ಸಾಲದೇ ಬಂದರೆ ಅದನ್ನು ಹೆಚ್ಚುಮಾಡುವ ವಿಚಾರವನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀಕಾಂತ ರುದ್ರಪ್ಪ ಅಂಬಡಗಟ್ಟಿ:- ಮಾನ್ಯ ಅಧ್ಯಕ್ಷರೆ, ವಿದ್ಯಾರ್ಥಿನಿಲಯಗಳಲ್ಲಿ ಉತ್ತಮವಾದ ಆಹಾರ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಎಂದು ಪ್ರಶ್ನೆಯನ್ನು ಕೇಳಿರುವುದಕ್ಕೆ ಸರ್ಕಾರದವರು ನಿಗದಿಪಡಿಸಿರುವ ಹಣಕ್ಕೆ ಅನುಗುಣವಾಗಿ ಆಹಾರವನ್ನು ನೀಡಲಾಗುತ್ತಿದೆ ಎಂದು ಉತ್ತರ ಇದೆ. ಆದರೆ ಉತ್ತಮ ಆಹಾರವನ್ನು ನೀಡಲಾಗುತ್ತಿದೆಯೆ? ಅಥವ ಇಲ್ಲವೆ? ಎಂಬುದನ್ನು ಅವರು ಹೇಳಬೇಕು.

ಅಧ್ಯಕ್ಷರು:- ಎಲ್ಲೆಲ್ಲಿ ನೀಡುತ್ತಿಲ್ಲ ಎಂಬುದು ನಿಮ್ಮ ಗಮನಕ್ಕೆ ಬರುತ್ತದೆ, ಅಂಥ ನಿರ್ದಿಷ್ಟ ಪ್ರಕರಣಗಳನ್ನು ಅವರ ಗಮನಕ್ಕೆ ತಂದರೆ, ಅವರು ಕ್ರಮ ಕೈಗೊಳ್ಳುತ್ತಾರೆ.

ಶ್ರೀಕಾಂತ ರುದ್ರಪ್ಪ ಅಂಬಡಗಟ್ಟಿ:- ಸರ್ಕಾರದವರು ನಿಗದಿಪಡಿಸಿರುವ ಹಣಕ್ಕನುಗುಣವಾಗಿ ಆಹಾರವನ್ನು ನೀಡಲಾಗುತ್ತಿದೆ, ಎಂದು ಉತ್ತರ ಕೊಟ್ಟಿದ್ದಾರೆ. ಆ ರೀತಿ ನಿಗದಿಪಡಿಸಿರುವ ಹಣದಲ್ಲಿ ಉತ್ತಮವಾದ ಆಹಾರವನ್ನು ಕೊಡುವುದಕ್ಕೆ ಸಾಧ್ಯವೆ? ಇಲ್ಲವೆ? ಎಂಬುದನ್ನು ಅವರು ಹೇಳಬೇಕು.

ಅಧ್ಯಕ್ಷರು:- ಅವರ ಮಾಹಿತಿಯ ಪ್ರಕಾರ ಸರಿಯಾಗಿಯೇ ಕೊಡುತ್ತಿದ್ದಾರೆ. ಎಲ್ಲಾದರೂ ಸರಿಯಾಗಿ ಕೊಡುತ್ತಿಲ್ಲ ಎಂಬುದು ನಿಮ್ಮ ಗಮನಕ್ಕೆ ಬಂದರೆ, ನೀವು ನಿರ್ದಿಷ್ಟವಾದ ಪ್ರಕರಣವನ್ನು ಅವರ ಗಮನಕ್ಕೆ ತಂದರೆ, ಅವರು ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಪಾಟೀಲ ನಾಗರಾಜ:- ಮಾನ್ಯ ಸಚಿವರ ಉತ್ತರದಲ್ಲಿ ''ಸರ್ಕಾರದವರು ನಿಗದಿಪಡಿಸಿರುವ ಹಣಕ್ಕೆ ಆಹಾರವನ್ನು ನೀಡಲಾಗುತ್ತಿದೆ.'' ಎಂದು ಹೇಳಿದ್ದಾರೆ.

ನಿಗದಿಪಡಿಸಿರುವ ಹಣಕ್ಕೆ ಯಾವ ಆಹಾರ? ನಿಗದಿಪಡಿಸಿರುವ ಹಣಕ್ಕೆ ತಕ್ಕ ಆಹಾರ ಎಂದರೆ ಯಾವುದು? ಎಂಬುದನ್ನು ಸ್ಪಷ್ಟಪಡಿಸಬೇಕಾದುದು ಒಂದು.

ಇನ್ನು ಎರಡನೆಯ ಪ್ರಶ್ನೆ ಎಂದರೆ, ಅವರು 250ರೂ. ಮತ್ತು 300 ರೂ.ಗಳಂತೆ ಕೊಡುತ್ತಿದ್ದರೆ, ಇದರಲ್ಲಿ ವಿದ್ಯಾರ್ಥಿಗಳಿಗೆ ತಲುಪತಕ್ಕದ್ದು 50 ಭಾಗ. ಅಂದರೆ ದಿನಕ್ಕೆ 4ರಿಂದ 5ರೂ. ಈ 4-5 ರೂ.ನಲ್ಲಿ ಇವರು ಯಾವ ರೀತಿಯ ಆಹಾರವನ್ನು ಆ ವಿದ್ಯಾರ್ಥಿಗಳಿಗೆ ಕೊಡಬಲ್ಲದು?

ಅಧ್ಯಕ್ಷರು:- ನಾನು ತಮಗೆ ಹೇಳಿಬಿಡುತ್ತೇನೆ. ಹಳೇ ದರದಲ್ಲೇ ಕೊಡುತ್ತಿದ್ದೀರಿ. ಇದು ಸಾಕಾಗುವುದಿಲ್ಲ, ಇದನ್ನು ಪುನರ್ ವಿಮರ್ಶೆ ಮಾಡಿ ಜಾಸ್ತಿ ಮಾಡಬೇಕೆಂಬುದು ಎಲ್ಲರ ಪ್ರಶ್ನೆಯಾಗಿದೆ. ಮಾನ್ಯ ಕೃಷ್ಣಾರೆಡ್ಡಿಯವರೆ, ಮಾನ್ಯ ಸದಸ್ಯರ ಮಾತಿನ ಒಟ್ಟು ಅರ್ಥ ಇಷ್ಟೆ, ಕೊಡುತ್ತಿರುವ ಹಣವನ್ನು ರಿವೈಸ್ ಮಾಡಬೇಕು ಎಂಬುದು.

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ:- ಆ ವಿದ್ಯಾರ್ಥಿಗಳಿಗೆ ಯಾವ ರೀತಿಯ ಆಹಾರವನ್ನು ಕೊಡುತ್ತಿದ್ದಾರೆಂಬ ಬಗ್ಗೆ ಬಹಳ ಕಳಕಳಿ ಇದೆ. ನಾನೂ ಕೂಡ ಕೆಲವು ಹಾಸ್ಟೆಲ್‌ಗಳಿಗೆ ಭೇಟಿ ನೀಡಿ ನೋಡಿದ್ದೇನೆ. ಬೆಳಿಗ್ಗೆ ಹಾಲು ಕೊಡುತ್ತಾರೆ. ಕೆಲವರು ಉಪಾಹಾರ ಕೊಡುತ್ತಾರೆ. ಎರಡು ಹೊತ್ತು ಊಟ ಕೊಡುತ್ತಾರೆ. ನೀವು ಕೊಡುವ ಕೇವಲ 300 ರೂ.ನಿಂದ ಇದೆಲ್ಲಾ ಸಾಧ್ಯವೆ? ಎಂಬುದು ನಿಮ್ಮ ಅನುಮಾನ. ನಾನೂ ಕೂಡ ಇದರ ಬಗ್ಗೆ ವಿಚಾರ ಮಾಡುತ್ತಿದ್ದೇನೆ. ಕೆ.ಜಿ.ಗೆ 3.20ರೂ.ನಂತೆ ಪಡಿತರ ವ್ಯವಸ್ಥೆಯಲ್ಲಿ ನಾವು ಅಕ್ಕಿಯನ್ನು ಕೊಳ್ಳುತ್ತಿರುವುದರಿಂದ ಅಗ್ಗದ ದರದಲ್ಲಿ ಅಕ್ಕಿ ಸಿಕ್ಕಿದಂತಾಗುತ್ತಿದೆ. ಒಳ್ಳೆಯ ಅಕ್ಕಿಯನ್ನು ನಾವು ಕೊಡುತ್ತಿರುವುದರಿಂದ ಊಟದ ವ್ಯವಸ್ಥೆ ಚೆನ್ನಾಗಿ ನಡೆಯುತ್ತಿದೆ. ಬೆಲೆ ಏರಿಕೆ ಜಾಸ್ತಿಯಾಗಿದ್ದರೆ ಸರ್ಕಾರ ಅದರ ಬಗ್ಗೆ ಗಮನಹರಿಸಿ, ಒಳ್ಳೆಯ ಆಹಾರವನ್ನು ಕೊಡುವುದಕ್ಕೆ ಪ್ರಯತ್ನಿಸುತ್ತದೆ.

ವಿಷಯ:- ಗುಂಡ್ಲುಪೇಟೆ ಪಟ್ಟಣಕ್ಕೆ ಕುಡಿಯುವ ನೀರನ್ನು ಒದಗಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 62 (412)

ಶ್ರೀ ಹೆಚ್.ಎಸ್.ಮಹದೇವಪ್ರಸಾದ್ (ಗುಂಡ್ಲುಪೇಟೆ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಗುಂಡ್ಲುಪೇಟೆ ಪಟ್ಟಣಕ್ಕೆ ಕಬಿನಿ ನದಿಯಿಂದ ಕುಡಿಯುವ ನೀರನ್ನು ಸರಬರಾಜು ಮಾಡುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆಯ ಅಂದಾಜು ವೆಚ್ಚವೆಷ್ಟು? ಹಾಗೂ ಇದುವರೆಗೆ ಖರ್ಚು ಮಾಡಲಾದ ಹಣವೆಷ್ಟು?

ಇ) ಈ ಯೋಜನೆಯನ್ನು ಪೂರ್ಣಗೊಳಿಸಲು ಕಾಲಾವಧಿಯನ್ನು ನಿಗಧಿಗೊಳಿಸಲಾಗಿದೆಯೇ?